## ಕರ್ನಾಟಕ ಸರ್ಕಾರ
## ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/01/ಇಎಪಿ/2024.

ಆಯುಕ್ತರವರ ಕಛೇರಿ,
ಕಾಲೇಜು ಮತ್ತುತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆರಸ್ತೆ, ಬೆಂಗಳೂರು-560001,
ದಿನಾಂಕ: 20.06.2024.

### ಜ್ಞಾಪನ

ವಿಷಯ: 2024-25 ನೇ ಶೈಕ್ಷಣಿಕ ಸಾಲಿನಲ್ಲಿ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನಡೆಸುವ ನವೆಂಬರ್-2024 ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ನೋಟಿಫಿಕೇಷನ್ ಸಂಖ್ಯೆ: ಬಿಟಿಇ/24/ಇಎಪಿ/97, ದಿ:31-12-97.
2. ಸರ್ಕಾರಿ ಆದೇಶ ಸಂ: ಇಡಿ/1/ಟಿಪಿಇ98, ದಿನಾಂಕ:11-08-2000.
3. ಸರ್ಕಾರಿ ಆದೇಶ ಸಂ: ಇಡಿ/257/ಟಿಪಿಇ/2003, ದಿ:31-3-2004.
4. ಸರ್ಕಾರಿ ಆದೇಶ ಸಂ: ಇಡಿ/11/ಟಿಪಿಇ/2007 ಬೆಂಗಳೂರು, ದಿ:3-12-2007.
5. ಸರ್ಕಾರಿ ಆದೇಶ ಸಂ: ಇಡಿ/215/ಟಿಪಿಇ/2010, ದಿ:2-8-2010.
6. ಸರ್ಕಾರಿ ಆದೇಶ ಸಂ: ಸಕಇ/357/ಬಿಎಎಸ್/2012, ಬೆಂಗಳೂರು, ದಿ: 7-11-2012.
7. ಸರ್ಕಾರಿ ಆದೇಶ ಸಂಖ್ಯೆ: ಇಡಿ/222/ಟಿಪಿಇ/2012, ಬೆಂಗಳೂರು, ದಿನಾಂಕ: 17ನೇ ಸೆಪ್ಟೆಂಬರ್ 2012.
8. ಸರ್ಕಾರಿ ತಿದ್ದುಪಡಿ ಆದೇಶ ಸಂಖ್ಯೆ: ಇಡಿ 138 ಡಿಟಿಇ 2023, ದಿನಾಂಕ: 06.02.2024.

*-*-*-*-*-*

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಡಿ ತಾಂತ್ರಿಕ ಪರೀಕ್ಷಾ ಮಂಡಳಿಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ 2024-25 ನೇ ಶೈಕ್ಷಣಿಕ ಸಾಲಿನ ನವೆಂಬರ್-2024ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗಳಿಗೆ ನೋಂದಾಯಿಸುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ (Technical / Non Technical Student) ಪರೀಕ್ಷಾ ಶುಲ್ಕ ಪಾವತಿಸುವ ಬಗ್ಗೆ ಸಂಪೂರ್ಣ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ.

ಅಂತಹ ವಿದ್ಯಾರ್ಥಿಗಳು ತಮ್ಮ ಸಂಸ್ಥೆಯಲ್ಲಿ ನಿಗಧಿತ ದಿನಾಂಕದ ಒಳಗೆ ನಿಗಧಿತ ಶುಲ್ಕ ಪಾವತಿಸಲು ಮತ್ತು ಶುಲ್ಕ ಪಾವತಿ ಚಲನ್ ಮತ್ತು ಅಗತ್ಯ ಲಗತ್ತುಗಳೊಂದಿಗೆ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಿ ನೋಂದಾಯಿಸಿಕೊಳ್ಳಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಈ ಕೆಳಗೆ ತಿಳಿಸಲಾದ ಪ್ರಕಾರ ನಿಗದಿಪಡಿಸಿಲಾದ ದಂಡ ಶುಲ್ಕ ಪಾವತಿಸಬೇಕಾಗುತ್ತದೆ.

1. ಸಂಸ್ಥೆಯಲ್ಲಿ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ವಿವರ:

ದಂಡರಹಿತ:

ಎ) ದಿನಾಂಕ: 20-06-2024 ರಿಂದ 12-08-2024 ರವರೆಗೆ (ಎರಡು ದಿನಗಳು ಸೇರಿ) ದಂಡರಹಿತವಾಗಿ.

ದಂಡಸಹಿತ:

ಬಿ) ಮೊದಲನೇ ಹಂತ ದಿನಾಂಕ: 13-08-2024 ರಿಂದ 26-08-2024 ರವರೆಗೆ (ಎರಡು ದಿನಗಳು ಸೇರಿ) ರೂ.50-00 (ರೂಪಾಯಿ ಐವತ್ತು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಸಿ) ಎರಡನೇ ಹಂತ ದಿನಾಂಕ: 27-08-2024 ರಿಂದ 09-09-2024 ರವರೆಗೆ (ಎರಡು ದಿನಗಳು ಸೇರಿ) ರೂ.100/- (ರೂಪಾಯಿ ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಡಿ) ಮೂರನೇ ಹಂತ ದಿನಾಂಕ: 10-09-2024 ರಿಂದ 23-09-2024 ರವರೆಗೆ (ಎರಡು ದಿನಗಳು ಸೇರಿ) ರೂ.200/- (ರೂಪಾಯಿಇನ್ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಇ) ನಾಲ್ಕನೇ ಹಂತದಿನಾಂಕ: 24-09-2024 ರಿಂದ 08-10-2024 ರವರೆಗೆ (ಎರಡು ದಿನಗಳು ಸೇರಿ) ರೂ.400/- (ರೂಪಾಯಿ ನಾಲ್ಕು ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಎಫ್) ದಿನಾಂಕ: 09-10-2024 ರಿಂದ ಪರೀಕ್ಷೆ ಪ್ರಾರಂಭವಾಗುವ 03 ದಿನಗಳ ಮೊದಲು ರೂ.2000.00 (ರೂಪಾಯಿಎರಡು ಸಾವಿರ ಮಾತ್ರ) ವಿಶೇಷ ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ. [ಈ ಶುಲ್ಕ ಪಾವತಿಸುವ ಮುನ್ನ ನಿರ್ದೇಶಕರು / ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ ಇವರಿಂದ ಲಿಖಿತ ಅನುಮತಿ ಪಡೆಯತಕ್ಕದ್ದು. ವಿಶೇಷ ಶುಲ್ಕ ಪಾವತಿಸಲು ವಿದ್ಯಾರ್ಥಿಯು ತನ್ನ ಅರ್ಜಿಯನ್ನು ಸಂಸ್ಥೆಯ ಮುಖಾಂತರ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು. ಅರ್ಜಿಯ ಜೊತೆಯಲ್ಲಿ ಆತನ ಸಂಪೂರ್ಣ ಹಾಜರಾತಿ ಮಾಹಿತಿ ಹಾಗೂ ಎಲ್ಲಾ ಪರೀಕ್ಷೆಗಳ ಅಂಕಪಟ್ಟಿ/ಗ್ರೇಡ್ ಕಾರ್ಡ್ಸ್ ಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಲು ತಿಳಿಸಲಾಗಿದೆ.]

<u>ಸೂಚನೆ (i)</u> ಉಲ್ಲೇಖ(4)ರ ಸರ್ಕಾರಿ ಆದೇಶದ ಪ್ರಕಾರ ಸಂಸ್ಥೆಯ ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಈ ಕೆಳಕಂಡಂತೆ ಪಡೆಯತಕ್ಕದ್ದು.

| | | |
|---|---|---|
| ಅ) | ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ. 300-00 |
| ಆ) | ಪ್ರತಿ ಸೆಮಿಸ್ಟರ್‌ನ 1 ವಿಷಯಕ್ಕೆ | ರೂ. 200-00 |
| ಇ) | ಪ್ರತಿ ಸೆಮಿಸ್ಟರ್‌ನ 2 ವಿಷಯಕ್ಕೆ | ರೂ. 200-00 |
| ಈ) | ಪ್ರತಿ ಸೆಮಿಸ್ಟರ್‌ನ 3 ವಿಷಯಕ್ಕೆ | ರೂ.300-00 |

<u>ಸೂಚನೆ (ii)</u> ಪರೀಕ್ಷಾ ಶುಲ್ಕದೊಂದಿಗೆ ಪ್ರತಿ ಸೆಮಿಸ್ಟರ್ ಪರೀಕ್ಷೆಯಅಂಕಪಟ್ಟಿ/ ಗ್ರೇಡ್ ಕಾರ್ಡ್ ಗಾಗಿ ರೂ.50-00 ಪಡೆಯುವಂತೆ ತಿಳಿಸಲಾಗಿದೆ.

<u>ಸೂಚನೆ (iii)</u>

(ಎ) ಪರೀಕ್ಷಾ ವಿಭಾಗಕ್ಕೆ ಸಂಬಂಧಪಟ್ಟಂತೆ ಪರೀಕ್ಷೆಯಎಲ್ಲಾರೀತಿಯ ಶುಲ್ಕಗಳನ್ನು ಖಜಾನೆ-2(K2) ಮುಖಾಂತರವೇ ಕಡ್ಡಾಯವಾಗಿ ಪಾವತಿಸತಕ್ಕದ್ದು. <u>(0202-02-101-0-01 ಲೆಕ್ಕಶೀರ್ಷಿಕೆ)</u>

(ಬಿ) ಪರೀಕ್ಷಾ ಶುಲ್ಕಗಳನ್ನು ಪಾವತಿಸುವ ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರತ್ಯೇಕವಾಗಿ ಚಲನ್‌ಗಳನ್ನು ಜನರೇಟ್ ಮಾಡಿಸಿಕೊಂಡುK2 ಮುಖಾಂತರವೇ ಪಾವತಿಸತಕ್ಕದ್ದು ಮತ್ತು ಪರೀಕ್ಷಾ ಅರ್ಜಿಗೆ ಚಲನ್ ಲಗತ್ತಿಸಿ ಕಡ್ಡಾಯವಾಗಿ ನಿಗದಿತ ದಿನಾಂಕದೊಳಗೆ ಸಂಸ್ಥೆಗೆ ಸಲ್ಲಿಸಿ ಪರೀಕ್ಷೆಗೆ ನೋಂದಾಯಿಸಿಕೊಳ್ಳುವುದು.

(ಸಿ) K2 ಚಲನ್ ಸಂಖ್ಯೆಯನ್ನು BTELinx ವೆಬ್‌ಪೋರ್ಟಲ್‌ನೊಂದಿಗೆ ಜೋಡಿಸಲಾಗುವುದು. ವಿದ್ಯಾರ್ಥಿಯ K2 ಚಲನ್ ಸಂಖ್ಯೆ ಇಲ್ಲದಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರವನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ.

(ಡಿ) K2 ಚಲನ್ ಮುಖಾಂತರ ಪರೀಕ್ಷಾ ಶುಲ್ಕಗಳನ್ನು ಪಾವತಿಸದಿದ್ದಲ್ಲಿಅದರಿಂದ ಮುಂದೆಉಂಟಾಗುವ ಬಾಧಕಗಳಿಗೆ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

(ಈ) ಸರ್ಕಾರಿಆದೇಶ ಸಂಖ್ಯೆ: ಸಕಇ/178/ಪಕವಿ/2015, ಬೆಂಗಳೂರು, ದಿ:31-12-2015 ರಲ್ಲಿ ನಿಗಧಿ ಪಡಿಸಿರುವಂತೆ ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ಚಾಲ್ತಿಗೆ ಬರುವ ಸರ್ಕಾರಿ ಆದೇಶಗಳನುಸಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ/ಆದಾಯದ ಮಿತಿಗಳಿಗನುಗುಣವಾಗಿ ನಿಗಧಿಪಡಿಸಲಾದ ಅರ್ಹತೆ ಮತ್ತು ಷರತ್ತಿಗೊಳಪಟ್ಟು ಪರೀಕ್ಷಾ ಶುಲ್ಕ ಮಂಜೂರಾತಿ/ಮರುಪಾವತಿಗೆ ಅವಕಾಶ ಕಲ್ಪಿಸಿ ಆದೇಶಿಸಿದೆ.

(ಎಫ್) ಸರ್ಕಾರಿಆದೇಶ ಸಂಖ್ಯೆ:ಹಿಂವಇ/397/ಬಿಎಂಎಸ್/2013, ಬೆಂಗಳೂರು, ದಿನಾಂಕ: 05-09-2013 ಮತ್ತು ಹಿಂವಕ/589/ಬಿಎಂಎಸ್/2013, ದಿ: 5-10-2013 & ತಿದ್ದುಪಡಿ ಹಾಗೂ ಸೇರ್ಪಡೆಆದೇಶ ದಿ: 06-08-2014 ಗಳಲ್ಲಿ ನಿಗದಿಪಡಿಸಿರುವಂತೆ ಪ್ರವರ್ಗ-1, 2ಎ, 3ಎ, & 3ಬಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ಆದಾಯದ ಮಿತಿಗಳಿಗನುಗುಣವಾಗಿ ನಿಗಧಿಪಡಿಸಲಾದ ಅರ್ಹತೆ ಮತ್ತು ಷರತ್ತಿಗೊಳಪಟ್ಟು ಪರೀಕ್ಷಾ ಶುಲ್ಕ ಮಂಜೂರಾತಿ/ಮರುಪಾವತಿಗೆ ಅವಕಾಶ ಕಲ್ಪಿಸಿ ಆದೇಶಿಸಿದೆ.

(ಜಿ) ಸರ್ಕಾರಿಆದೇಶ ಸಂಖ್ಯೆ: ಎಂಡಬ್ಲ್ಯುಡಿ /21/ ಎಂಡಿಎಸ್/2011, ಬೆಂಗಳೂರು, ದಿ:2-8-2014ಮತ್ತು ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯುಡಿ/400/ಎಂಡಿಎಸ್/2014, ದಿ: 17-10-2014 ರ ಪ್ರಕಾರ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಕುಟುಂಬದ ಆದಾಯವನ್ನು ನಿಗಧಿಪಡಿಸಲಾಗಿರುತ್ತದೆ ಹಾಗೂ ನಿಯಮಾನುಸಾರ ಉಲ್ಲೇಖ [4] ರ ಸರ್ಕಾರಿ ಆದೇಶದ ಪ್ರಕಾರ ಪರೀಕ್ಷಾ ಶುಲ್ಕವನ್ನು ಮತ್ತು ಪ್ರತಿ ಸೆಮಿಸ್ಟರ್ ಪರೀಕ್ಷೆಗೆ ಅಂಕಪಟ್ಟಿ/ ಗ್ರೇಡ್ ಕಾರ್ಡ್ ಶುಲ್ಕ ರೂ.50/-ನ್ನು ಸದರಿ ವಿದ್ಯಾರ್ಥಿಗಳಿಂದ ಕಡ್ಡಾಯವಾಗಿ ಪಡೆಯುವಂತೆ ತಿಳಿಸಲಾಗಿದೆ.

(ಹೆಚ್) ಪರೀಕ್ಷಾ ಶುಲ್ಕ ವಿನಾಯಿತಿ ನೀಡುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ: ಸಕಇ/357/ಬಿಎಂಎಸ್/2012, ಬೆಂಗಳೂರು, ದಿನಾಂಕ: 07-11-2012 ರ ಆದೇಶವನ್ನು ಪಾಲಿಸುವುದು.

(ಐ) ಎಲ್ಲಾ ಪ್ರವರ್ಗಗಳ ಅನುತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ಸಪ್ಲಿಮೆಂಟರಿ ಪರೀಕ್ಷೆ ತೆಗೆದುಕೊಳ್ಳುವವರು ಪರೀಕ್ಷಾ ಶುಲ್ಕ ಮಂಜೂರಾತಿ/ಮರುಪಾವತಿಗೆ ಅರ್ಹರಲ್ಲ. ಆದ್ದರಿಂದ ನಿಯಮಾನುಸಾರ ಪರೀಕ್ಷಾ ಶುಲ್ಕ ಪಾವತಿಸತಕ್ಕದ್ದು.

(ಜೆ) ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ರವರ ಕಛೇರಿಯಲ್ಲಿ ಯಾವುದೇ ಪರೀಕ್ಷಾ ಶುಲ್ಕವನ್ನು ಪಡೆಯಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಕಾಲಕಾಲಕ್ಕೆ ಹೊರಡಿಸಲಾದ ಅಧಿಸೂಚನೆಗಳು ಮತ್ತು ಸುತ್ತೋಲೆಗಳನ್ನು ಗಮನಿಸುವುದು ಮತ್ತು ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರಿಂದ ಸ್ಪಷ್ಟನೆ ಕೋರಬಹುದಾಗಿದೆ.

(2) ಸರ್ಕಾರಿ/ ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಪ್ರಾಚಾರ್ಯಗಳು ಪರೀಕ್ಷಾ ಶುಲ್ಕವನ್ನುK2 ಮುಖಾಂತರ ಸರ್ಕಾರಿ ಖಜಾನೆಗೆ ಲೆಕ್ಕ ಶೀರ್ಷಿಕೆ (0202-02-101-0-01)ಗೆ ಜಮಾ ಮಾಡುವ ಬಗ್ಗೆ ನಿಗಾವಹಿಸಿ ಕ್ರಮಕೈಗೊಳ್ಳುವುದು.

<u>ವಿಶೇಷ ಸೂಚನೆ:</u>

(i) ಸಂಸ್ಥೆಯ ಪ್ರಾಚಾರ್ಯರುಗಳು ಪ್ರವೇಶ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕವನ್ನುಕೂಡ ವಿದ್ಯಾರ್ಥಿಗಳಿಂದ ಪಡೆಯುವುದು.

(ii) ಫಲಿತಾಂಶ ತಡೆಹಿಡಿಯಲಾದ/ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂದಿನ ಸೆಮಿಸ್ಟರ್ ತರಗತಿಗಳಿಗೆ ಹಾಜರಾಗಲು ಅನುಮತಿ ನೀಡಿ ಫಲಿತಾಂಶ ಪ್ರಕಟಗೊಂಡ ನಂತರ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡುವುದು ಮತ್ತು ಅಂತಹ ಪ್ರಕರಣಗಳ ಜವಾಬ್ದಾರಿಯನ್ನು ಪ್ರಾಚಾರ್ಯರೇ ತೆಗೆದುಕೊಳ್ಳಬೇಕಾಗುತ್ತದೆ.

(iii) ಮೇ-2024 ರ ಪರೀಕ್ಷೆಗಳಲ್ಲಿ ಶಂಕಿತ ಪರೀಕ್ಷಾ ದುರಾಚಾರದಡಿ ಪ್ರಕರಣ ದಾಖಲಾಗಿದ್ದು ಪ್ರಕರಣ ಇತ್ಯರ್ಥವಾಗಿರದ ವಿದ್ಯಾರ್ಥಿಗಳಿಗೆ ಸದರಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂದಿನ ಸೆಮಿಸ್ಟರ್ ತರಗತಿಗಳಿಗೆ ಹಾಜರಾಗಲು ಅನುಮತಿ ನೀಡಿ ದುರಾಚಾರ ಪ್ರಕರಣ ಇತ್ಯರ್ಥಗೊಂಡ ನಂತರ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡುವುದು. ಮತ್ತು ಅಂತಹ ಪ್ರಕರಣಗಳ ಜವಾಬ್ದಾರಿಯನ್ನೂ ಕೂಡ ಪ್ರಾಚಾರ್ಯರೇ ತೆಗೆದುಕೊಳ್ಳಬೇಕಾಗಿರುತ್ತದೆ.

(iv) 3ನೇ ಮತ್ತು 5ನೇ ಸೆಮಿಸ್ಟರ್‌ಗಳಿಗೆ ಪ್ರವೇಶ ನೀಡುವಾಗ ಉಲ್ಲೇಖ (7) ರ ಸರ್ಕಾರಿ ಆದೇಶದಲ್ಲಿ ಕ್ರಮಸಂಖ್ಯೆ (8)ರಲ್ಲಿ ವಿವರಿಸಿರುವಂತೆ ನಡೆದುಕೊಳ್ಳುವುದು. ಯಾವುದೇ ಸೆಮಿಸ್ಟರ್‌ಗಳಿಗೆ ಪ್ರವೇಶ ನೀಡುವ ಸಂದರ್ಭದಲ್ಲಿ, ವಿದ್ಯಾರ್ಥಿಯು ಹಿಂದಿನ ಯಾವುದಾದರೂ ಪರೀಕ್ಷೆಗಳಲ್ಲಿ ಪರೀಕ್ಷಾ ದುರಾಚಾರ ಪ್ರಕರಣದಲ್ಲಿ ಶಿಕ್ಷೆಯಾಗಿದ್ದಲ್ಲಿ ಸದರಿ ಶಿಕ್ಷೆಗನುಸಾರವಾಗಿ ಪ್ರವೇಶ ನೀಡಬಹುದೇ ಇಲ್ಲವೇ ಹಾಗೂ ವಿದ್ಯಾರ್ಥಿಗಳು ಹಿಂದಿನ ಸೆಮಿಸ್ಟರ್ ಪರೀಕ್ಷೆಯಲ್ಲಿ ಪರೀಕ್ಷಾ ಶುಲ್ಕ ಪಾವತಿಸಿ ಹಾಜರಾಗದಿರುವ ಬಗ್ಗೆ ಖಚಿತಪಡಿಸಿಕೊಂಡು ಮುಂದಿನ ಸೆಮಿಸ್ಟರ್‌ಗೆ ಪ್ರವೇಶ ನೀಡಲು ಕ್ರಮವಹಿಸುವಂತೆ ಸೂಚಿಸಲಾಗಿದೆ.

(v) ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳು, ವಿಭಾಗಾಧಿಕಾರಿಗಳು ಹಾಗು ಸಂಬಂಧಪಟ್ಟ ವಿಷಯ ನಿರ್ವಾಹಕರು ತಮ್ಮ ತಮ್ಮ ಸಂಸ್ಥೆಯ ವಿದ್ಯಾರ್ಥಿಗಳ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿ Candidate List ನ್ನು ಇಂದೀಕರಿಸುವುದು ಅತ್ಯಂತ ಪ್ರಮುಖವಾದುದು ಎಂಬುದನ್ನು ಮತ್ತೊಮ್ಮೆ ಎಲ್ಲರ ಗಮನಕ್ಕೆ ಸೂಚ್ಯವಾಗಿ ತಿಳಿಸಲಾಗಿದೆ.

ನವೆಂಬರ್-2024ರ ಡಿಪ್ಲೊಮ ಸೆಮಿಸ್ಟರ್ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳ ವಿವರಗಳನ್ನು ಪರೀಕ್ಷಾ ಶುಲ್ಕ ಪಾವತಿಸಿದ ಕೂಡಲೇ ತಾವು ಈಗಾಗಲೇ ಉಪಯೋಗಿಸುತ್ತಿರುವ BTELinx ಮುಖಾಂತರ ಪರೀಕ್ಷಾ ಶುಲ್ಕ ಪಾವತಿಸಿರುವ ಚಲನ್ ಸಂಖ್ಯೆ ನಮೂದಿಸಿರುವ ಆಧಾರದ ಮೇಲೆ Update ಮಾಡಬೇಕಾಗಿರುತ್ತದೆ. ಈ ವಿವರಗಳ ಆಧಾರದಲ್ಲಿ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಸಂಸ್ಥೆಗಳಲ್ಲಿಯೇ ಮುದ್ರಿಸಿಕೊಳ್ಳಬೇಕಾಗಿರುತ್ತದೆ, ಆದ್ದರಿಂದ ಪ್ರಾಚಾರ್ಯರುಗಳು ಹೆಚ್ಚಿನ ಮುತುವರ್ಜಿ ವಹಿಸಲು ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

ಇವರಿಗೆ,

ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ - ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:
1. ಆಯುಕ್ತರ ಆಪ್ತ ಶಾಖೆ - ಅವಗಾಹನೆಗಾಗಿ.
2. ನಿರ್ದೇಶಕರ ಆಪ್ತ ಶಾಖೆ- ಅವಗಾಹನೆಗಾಗಿ.
3. ಸಹಾಯಕ ನಿರ್ದೇಶರು (ಎಸಿಎಂ)
4. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
5. ಇಸಿಎಸ್/ಇಎಫ್‌ಎಸ್/ಇಆರ್‌ಎಸ್, ಮುಂದಿನ ಕ್ರಮಕ್ಕಾಗಿ.
6. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ರಿಜಿಸ್ಟ್ರಾರ್ (ಪರೀಕ್ಷೆ)
8. ಕಾರ್ಯದರ್ಶಿಯವರ ಆಪ್ತ ಶಾಖೆ.
9. ಉಪ ನಿರ್ದೇಶಕರು (ಪರೀಕ್ಷೆ)
10. ಅಧೀಕ್ಷಕರು ಆರ್ ಡಿ ಎಂ (01)ರಿಂದ (15)
11. ಗಣಕ ಕೇಂದ್ರ ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು.
12. ಕಚೇರಿ ಪ್ರತಿ.

**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/01/ಇಎಪಿ/2024.

ಆಯುಕ್ತರವರ ಕಛೇರಿ,
ಕಾಲೇಜು ಮತ್ತುತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆರಸ್ತೆ, ಬೆಂಗಳೂರು-560001,
ದಿನಾಂಕ: 20.06.2024.

**ಜ್ಞಾಪನ**

ವಿಷಯ: ಸಿಐಪಿಇಟಿ (Central Institute of Plastic Engineering & Technology –CIPET) ಮೈಸೂರು ಸಂಸ್ಥೆಯು ನಡೆಸುವ 3 ವರ್ಷಗಳ ಡಿಪ್ಲೊಮ ಇನ್ ಪ್ಲಾಸ್ಟಿಕ್ ಟೆಕ್ನಾಲಜಿ ಮತ್ತು ಪ್ಲಾಸ್ಟಿಕ್ ಮೋಲ್ಡ್ ಟೆಕ್ನಾಲಜಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿರುವ ಹಾಗೂ ಮಾಡುತ್ತಿರುವ ಅಭ್ಯರ್ಥಿಗಳು (2018-19 ನೇ ಸಾಲಿಗೆ ಮೊದಲು ಪ್ರವೇಶ ಪಡೆದ ವಿದ್ಯಾರ್ಥಿಗಳು ಮಾತ್ರ) ಕೆಲವೊಂದು ಬ್ರಿಡ್ಜ್ ವಿಷಯಗಳನ್ನಾಗಿ 2024-25 ನೇ ಶೈಕ್ಷಣಿಕ ಸಾಲಿನಲ್ಲಿ ನಡೆಸುವ ನವೆಂಬರ್-2024ರ ಸೆಮಿಸ್ಟರ್ ಪರೀಕ್ಷೆಗೆ ಹೆಸರು ನೋಂದಾಯಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂ:ಇಡಿ/20/ಟಿಇಸಿ/2015, ದಿನಾಂಕ:07-04-2016.
2. ಮಾನ್ಯ ಆಯುಕ್ತರ ಕಚೇರಿ ಜ್ಞಾಪನ ಸಂಖ್ಯೆ: ಡಿಟಿಇ/30/ಸಿಡಿಸಿ(1)/2021-22, ದಿನಾಂಕ: 08-11-2021.
3. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಡಿ 138 ಡಿಟಿಇ 2023, ದಿನಾಂಕ: 06.02.2024.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಆದೇಶ ಸಂಖ್ಯೆ: ಇಡಿ 20 ಟಿಇಸಿ 2015 ದಿನಾಂಕ: 07.04.2016 ರಲ್ಲಿ ಮೈಸೂರಿನ ಸಿಐಪಿಇಟಿ–(CIPET) ಸಂಸ್ಥೆಯು ನಡೆಸುವ 3 ವರ್ಷಗಳ ಡಿಪ್ಲೊಮ ಇನ್ ಪ್ಲಾಸ್ಟಿಕ್ ಟೆಕ್ನಾಲಜಿ ಮತ್ತು ಪ್ಲಾಸ್ಟಿಕ್ ಮೋಲ್ಡ್ ಟೆಕ್ನಾಲಜಿ ಕೋರ್ಸಿನ ವಿದ್ಯಾರ್ಥಿಗಳು 3, 4, 5 ಮತ್ತು 6ನೇ ಸೆಮಿಸ್ಟರ್ ಗಳಲ್ಲಿ ಈ ಕೆಳಕಂಡ ವಿಷಯಗಳನ್ನು/ಪಠ್ಯಕ್ರಮಗಳನ್ನು ಬಾಹ್ಯ ವಿಷಯಗಳನ್ನಾಗಿ ಅಭ್ಯಾಸ ಮಾಡಿ ತೇರ್ಗಡೆ ಹೊಂದಿದಲ್ಲಿ, ಕರ್ನಾಟಕ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಡಿಪ್ಲೊಮ ಇನ್ ಪಾಲಿಮರ್ ಟೆಕ್ನಾಲಜಿ ಕೋರ್ಸಿಗೆ ತತ್ಸಮಾನವಾಗಿ ಪರಿಗಣಿಸಲು ಮತ್ತು ಲ್ಯಾಟರಲ್ ಎಂಟ್ರಿ ಮೂಲಕ ಬಿ.ಇ. ವ್ಯಾಸಂಗ ಮುಂದುವರೆಸಲು ಅನುಮತಿ ನೀಡಿ ಆದೇಶಿಸಿದೆ.

ಪ್ರಯುಕ್ತ ಉಲ್ಲೇಖ(2)ರ ಜ್ಞಾಪನದನ್ವಯ 2017-18ನೇ ಸಾಲಿನವರೆಗೆ ಪ್ರವೇಶ ಪಡೆದು ಸಿಐಪಿಇಟಿ ನಲ್ಲಿ ಹಾಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹಾಗೂ ಈಗಾಗಲೇ ವ್ಯಾಸಂಗವನ್ನು ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಡಿಪ್ಲೊಮ ಇನ್ ಪಾಲಿಮರ್ ಟೆಕ್ನಾಲಜಿ ಕೋರ್ಸಿಗೆ ತತ್ಸಮಾನತೆ ಪಡೆಯಲು, ಈ ಕೆಳಕಂಡಂತೆ ಬ್ರಿಡ್ಜ್ ಕೋರ್ಸುಗಳನ್ನು ಅಭ್ಯಸಿಸಿ ತೇರ್ಗಡೆ ಹೊಂದಬೇಕಾಗಿರುತ್ತದೆ.

| ಸೆಮಿಸ್ಟರ್ | ಕೋರ್ಸು ವಿಷಯಗಳ ವಿವರ | ವಿಷಯ/ಪ್ರಶ್ನೆ ಪತ್ರಿಕೆಕೋಡ್ |
|---|---|---|
| III | 1. Physical Chemistry | 9SCH31 |
| | 2. Elements of Chemical Engineering | 9PO32 |
| IV | 1. Organic Chemistry | 9CH41 |
| | 2. Compounding Technology | 9PO42 |
| | 3. Rubber Material Technology | 9PO44 |
| V | 1. Rubber Processing Technology | 9PO52 |
| | 2. Engineering Chemistry | 9PO53 |
| VI | 1. Polymer Products and Manufacturing | 9PO61 |
| | 2. Polymer Blends and Composites | 9PO62 |
| | 3. Instrumentation and Process Control | 9PO64 |

ಈ ಮೇಲ್ಕಂಡ ಬ್ರಿಡ್ಜ್ ಕೋರ್ಸುಗಳನ್ನು ಸಿಐಪಿಇಟಿ ನಲ್ಲಿ "ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು" ಮೂರನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುವಾಗ ಮೂರನೇ ಸೆಮಿಸ್ಟರ್ ನ ಬ್ರಿಡ್ಜ್ ವಿಷಯಗಳನ್ನು, ನಾಲ್ಕನೇ ಸೆಮಿಸ್ಟರ್ ನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ನಾಲ್ಕನೇ ಸೆಮಿಸ್ಟರ್ ನ ಬ್ರಿಡ್ಜ್ ವಿಷಯಗಳನ್ನು, ಐದನೇ ಸೆಮಿಸ್ಟರ್ ನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಐದನೇ ಸೆಮಿಸ್ಟರ್ ನ ಬ್ರಿಡ್ಜ್ ವಿಷಯಗಳನ್ನು ಮತ್ತು ಆರನೇ ಸೆಮಿಸ್ಟರ್ ನಲ್ಲಿ ವ್ಯಾಸಂಗ ಮಾಡುವಾಗ ಆರನೇ ಸೆಮಿಸ್ಟರ್ ಬ್ರಿಡ್ಜ್ ವಿಷಯಗಳ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ.

ಒಂದು ವೇಳೆ ನಾಲ್ಕನೇ ಸೆಮಿಸ್ಟರ್ ನಲ್ಲಿ ವ್ಯಾಸಂಗ ಮಾಡುವ ಸಿಐಪಿಇಟಿ ವಿದ್ಯಾರ್ಥಿಗಳು ಮೂರನೇ ಸೆಮಿಸ್ಟರ್ ನ ಬ್ರಿಡ್ಜ್ ವಿಷಯಗಳ ಪರೀಕ್ಷೆ ತೆಗೆದುಕೊಳ್ಳದಿದ್ದರೆ ಮೂರು ಮತ್ತು ನಾಲ್ಕನೇ ಸೆಮಿಸ್ಟರ್ ಬ್ರಿಡ್ಜ್ ವಿಷಯಗಳ ಪರೀಕ್ಷೆ ಒಟ್ಟಿಗೆ ತೆಗೆದುಕೊಳ್ಳಬೇಕಾಗುತ್ತದೆ. ಐದನೇ ಸೆಮಿಸ್ಟರ್ ನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಮೂರು ಮತ್ತು ನಾಲ್ಕನೆ ಸೆಮಿಸ್ಟರ್ ನ ಬ್ರಿಡ್ಜ್ ವಿಷಯಗಳಿಗೆ ಪರೀಕ್ಷೆ ತೆಗೆದುಕೊಳ್ಳದೆ ಇದ್ದಲ್ಲಿ ಮೂರನೇ , ನಾಲ್ಕನೇ ಮತ್ತು ಐದನೇ ಸೆಮಿಸ್ಟರ್ ನ ಬ್ರಿಡ್ಜ್ ವಿಷಯಗಳ ಪರೀಕ್ಷೆಗಳನ್ನು ಒಟ್ಟಿಗೆ ತೆಗೆದುಕೊಳ್ಳಬೇಕಾಗುತ್ತದೆ. ಆರನೇ ಸೆಮಿಸ್ಟರ್ ನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಮೂರು, ನಾಲ್ಕು ಹಾಗೂ ಐದನೇ ಸೆಮಿಸ್ಟರ್ ನ ಬ್ರಿಡ್ಜ್ ವಿಷಯಗಳ ಪರೀಕ್ಷೆ ತೆಗೆದುಕೊಳ್ಳದಿರುವ ವಿದ್ಯಾರ್ಥಿಗಳು ಮೂರನೇ, ನಾಲ್ಕನೇ, ಐದನೇ ಮತ್ತು ಆರನೇ ಸೆಮಿಸ್ಟರ್ ನ ಬ್ರಿಡ್ಜ್ ವಿಷಯಗಳ ಪರೀಕ್ಷೆಗಳನ್ನು ಒಟ್ಟಿಗೆ ತೆಗೆದುಕೊಳ್ಳಬೇಕಾಗುತ್ತದೆ.

ಈಗಾಗಲೇ ಸಿಐಪಿಇಟಿ ಯಿಂದ ಡಿಪ್ಲೊಮ "ಪೂರ್ಣ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು" ಮೂರನೇ, ನಾಲ್ಕನೇ, ಐದನೇ ಮತ್ತು ಆರನೇ ಸೆಮಿಸ್ಟರ್ ನ ಬ್ರಿಡ್ಜ್ ವಿಷಯಗಳ ಪರೀಕ್ಷೆಯನ್ನು ಒಟ್ಟಿಗೆ ತೆಗೆದುಕೊಳ್ಳಬಹುದಾಗಿದೆ.

ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಈ ಬ್ರಿಡ್ಜ್ ಕೋರ್ಸಿನ ಪಠ್ಯ ವಿಷಯಗಳು ಸಿಐಪಿಇಟಿ (CIPET) ಕೋರ್ಸಿನ Carry Over ಗೆ ಸಂಬಂಧಿಸುವುದಿಲ್ಲ.

ಈ ಬ್ರಿಡ್ಜ್ ವಿಷಯಗಳನ್ನು ಸಿಐಪಿಇಟಿ (CIPET) ವಿದ್ಯಾರ್ಥಿಗಳಿಗೆ "ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು" ಸಂಸ್ಥೆಯಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸಿಐಪಿಇಟಿ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು/ಅಭ್ಯರ್ಥಿಗಳು WWW.dtek.karnataka.gov.in ವೆಬ್ ಸೈಟಿನಲ್ಲಿ ಪರೀಕ್ಷಾ ಅರ್ಜಿಯನ್ನು ಡೌನ್ ಲೋಡ್ ಮಾಡಿ ಭರ್ತಿ ಮಾಡಿದ ಅರ್ಜಿಯನ್ನು ಸಿಐಪಿಇಟಿ ಸಂಸ್ಥೆಯ ಪ್ರಾಚಾರ್ಯರ ಮುಖಾಂತರ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಸಿಐಪಿಇಟಿ ಸಂಸ್ಥೆಯ ಪ್ರಾಚಾರ್ಯರು ವಿದ್ಯಾರ್ಥಿಗಳ ಪಟ್ಟಿ ಸಿದ್ಧಪಡಿಸಿ, ತಮ್ಮ ಶಿಫಾರಸ್ಸಿನೊಂದಿಗೆ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

**ಪರೀಕ್ಷಾ ಶುಲ್ಕ ಪಾವತಿಸುವ ವಿವರ:-**

**ದಂಡ ರಹಿತ:**

ಎ) ದಿನಾಂಕ: 20.06.2024 ರಿಂದ 12.08.2024 (ಎರಡೂ ದಿನಗಳು ಸೇರಿ)

**ದಂಡಸಹಿತ:**

ಬಿ) ಮೊದಲನೇ ಹಂತ ದಿನಾಂಕ: **13-08-2024** ರಿಂದ **26-08-2024 ರವರೆಗೆ** (ಎರಡು ದಿನಗಳು ಸೇರಿ) ರೂ.**50-00** (ರೂಪಾಯಿ ಐವತ್ತು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಸಿ) ಎರಡನೇ ಹಂತ ದಿನಾಂಕ: **27-08-2024** ರಿಂದ **09-09-2024 ರವರೆಗೆ** (ಎರಡು ದಿನಗಳುಸೇರಿ) ರೂ.**100**/- (ರೂಪಾಯಿ ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಡಿ) ಮೂರನೇ ಹಂತ ದಿನಾಂಕ: **10-09-2024** ರಿಂದ **23-09-2024** ರವರೆಗೆ(ಎರಡು ದಿನಗಳುಸೇರಿ) ರೂ.**200**/- (ರೂಪಾಯಿಇನ್ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಇ) ನಾಲ್ಕನೇ ಹಂತ ದಿನಾಂಕ: **24-09-2024** ರಿಂದ **08-10-2024** ರವರೆಗೆ (ಎರಡು ದಿನಗಳುಸೇರಿ) ರೂ.**400**/- (ರೂಪಾಯಿ ನಾಲ್ಕು ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಎಫ್) ದಿನಾಂಕ: **09-10-2024** ರಿಂದ ಪರೀಕ್ಷೆ ಪ್ರಾರಂಭವಾಗುವ 03 ದಿನಗಳ ಮೊದಲು ರೂ.**2000.00** (ರೂಪಾಯಿ ಎರಡು ಸಾವಿರ ಮಾತ್ರ) ವಿಶೇಷ ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಪ್ರತಿ ಸೆಮಿಸ್ಟರ್ ಗೆ ಎರಡು ವಿಷಯಗಳವರೆಗೆ ರೂ.200-00 ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕ ರೂ.50-00 ಗಳನ್ನು ಹಾಗೂ ಎರಡಕ್ಕಿಂತ ಮೇಲ್ಪಟ್ಟು ವಿಷಯಗಳಿಗೆ ರೂ.300-00 ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕ ರೂ.50-00 ಗಳನ್ನು ಪರೀಕ್ಷೆ ತೆಗೆದುಕೊಳ್ಳಲು ಖಜಾನೆ-2 **(K2)** ಮುಖಾಂತರ ಸರ್ಕಾರಿ ಖಜಾನೆಗೆ 0202-02-101-0-01 ಲೆಕ್ಕ ಶೀರ್ಷಿಕೆಗೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.

ಈ ವಿಷಯ ಕುರಿತು ಹೆಚ್ಚಿನ ವಿವರಗಳಿಗೆ ಪ್ರಿನ್ಸಿಪಾಲರು, ಸಿಐಪಿಇಟಿ (CIPET) ಮೈಸೂರು ಈ ವಿದ್ಯಾಸಂಸ್ಥೆಯಲ್ಲಿ ವಿಚಾರಿಸಲು ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ.

ಕಾರ್ಯದರ್ಶಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

ಇವರಿಗೆ
ಪ್ರಿನ್ಸಿಪಾಲರು, ಸಿಐಪಿಇಟಿ, ಮೈಸೂರು – ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿ:
1. ಪ್ರಿನ್ಸಿಪಾಲರು, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು – ಸೂಕ್ತ ಕ್ರಮಕ್ಕಾಗಿ
2. ಆಯುಕ್ತರ ಆಪ್ತ ಶಾಖೆ - ಅವಗಾಹನೆಗಾಗಿ.
3 ನಿರ್ದೇಶಕರ ಆಪ್ತ ಶಾಖೆ- ಅವಗಾಹನೆಗಾಗಿ.
4. ಸಹಾಯಕ ನಿರ್ದೇಶರು (ಎಸಿಎಂ)
5. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
6. ಇಸಿಎಸ್/ಇಎಫ್‌ಎಸ್/ಇಆರ್‌ಎಸ್, ಮುಂದಿನ ಕ್ರಮಕ್ಕಾಗಿ.
7. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
8. ರಿಜಿಸ್ಟ್ರಾರ್ (ಪರೀಕ್ಷೆ)
9. ಕಾರ್ಯದರ್ಶಿಯವರ ಆಪ್ತ ಶಾಖೆ.
10. ಉಪ ನಿರ್ದೇಶಕರು (ಪರೀಕ್ಷೆ)
11. ಅಧೀಕ್ಷಕರು ಆರ್ ಡಿ ಎಂ (01)ರಿಂದ (15)
12. ಗಣಕ ಕೇಂದ್ರ ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು.
13. ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/01/ಇಎಪಿ/2024.

ಆಯುಕ್ತರವರ ಕಛೇರಿ,
ಕಾಲೇಜು ಮತ್ತುತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆರಸ್ತೆ, ಬೆಂಗಳೂರು-560001,
ದಿನಾಂಕ: 20.06.2024.

ಇವರಿಗೆ:

ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ

ಮಾನ್ಯರೆ,

ವಿಷಯ: ಮೇ-2024ರ ಡಿಪ್ಲೊಮಾ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸುವ ಬಗ್ಗೆ.

*-*-*-*-*-*

2024 ರ ಮೇ ತಿಂಗಳಲ್ಲಿ ನಡೆಸಲಾದ ಸೆಮಿಸ್ಟರ್ ಪದ್ಧತಿಯ ಡಿಪ್ಲೋಮಾ ಪರೀಕ್ಷೆಯ ಫಲಿತಾಂಶಗಳನ್ನು ದಿನಾಂಕ: 18.06.2024 ರ ಮಂಗಳವಾರ ಅಪರಾಹ್ನ 2.00 ಗಂಟೆಗೆ ಪ್ರಕಟಿಸಲಾಗಿರುತ್ತದೆ. BTELinx ವೆಬ್ ಪೋರ್ಟಲ್ ಮೂಲಕ ಕಾರ್ಯದರ್ಶಿಯವರ ಮುದ್ರಿತ ಸಹಿ ಇರುವ ತಮ್ಮ ಸಂಸ್ಥೆಯ ಫಲಿತಾಂಶವನ್ನು ಪಡೆದು ಒಂದು ಪ್ರತಿಯನ್ನು ಮೇಲೆ ತಿಳಿಸಿದ ದಿನಾಂಕದಂದು ಅಪರಾಹ್ನ 2.00 ಗಂಟೆಗೆ ನಿಮ್ಮ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿರುತ್ತದೆ.

ಮೇ-2024 ರ ಪರೀಕ್ಷೆಯ ಮರು ಮೌಲ್ಯಮಾಪನ/ಫೋಟೊ ಪ್ರತಿಗೆ ಅರ್ಜಿ ಸಲ್ಲಿಸುವ ಬಗ್ಗೆ ಸುತ್ತೋಲೆಯನ್ನು ಪ್ರಕಟಿಸಲಾಗಿದೆ.

ಪ್ರವೇಶ ಅನುಮೋದನೆ ಪಡೆಯದ ಹಾಗೂ ಇತರೆ ಕಾರಣಗಳಿಗಾಗಿ ಅನರ್ಹರಾದ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ತಡೆಹಿಡಿಯಲಾಗುವುದೆಂದು ತಿಳಿಸಲಾಗಿದೆ. ಇಂತಹ ಪ್ರಕರಣಗಳಲ್ಲಿ ಸಂಸ್ಥೆಯವರು ಮಂಡಳಿಯ ಪತ್ರಕ್ಕಾಗಿ ಕಾಯದೇ ಅಗತ್ಯವಾದ ದಾಖಲೆಗಳನ್ನು ಕಳುಹಿಸಿದ ನಂತರವೇ ಫಲಿತಾಂಶ ಪ್ರಕಟಿಸಿ ಅಂಕಪಟ್ಟಿಗಳನ್ನು ಕಳುಹಿಸಲಾಗುವುದಾಗಿ ತಿಳಿಸಲಾಗಿದೆ. ಪ್ರವೇಶಾನುಮೋದನೆಯಾಗದ / ಇತರೆ ಕಾರಣಗಳಿಗಾಗಿ ಅನರ್ಹರಾದವರ ಫಲಿತಾಂಶ ಪ್ರಕಟವಾಗಿದ್ದಲ್ಲಿ ಅಂಥ ಪ್ರಕರಣಗಳ ಬಗ್ಗೆ ಪ್ರಿನ್ಸಿಪಾಲರು ಕೂಡಲೇ ಪ್ರತ್ಯೇಕವಾಗಿ ಮಂಡಳಿಯ ಗಮನಕ್ಕೆ ತರಲು ಸೂಚಿಸಲಾಗಿದೆ.

ಸೆಮಿಸ್ಟರ್ ಪದ್ಧತಿಯ ಅಭ್ಯರ್ಥಿಗಳ ತಡೆ ಹಿಡಿಯಲಾದ ಫಲಿತಾಂಶವನ್ನು ಅಭ್ಯರ್ಥಿಗಳ ನೋಂದಣಿ ಸಂಖ್ಯೆಯುಳ್ಳ ಅರ್ಜಿ, ಹಾಜರಾದ ಬಗ್ಗೆ ಮಾಹಿತಿ, ಹಿಂದೆ ಪರೀಕ್ಷೆಗೆ ಹಾಜರಾದ ಅಂಕಪಟ್ಟಿಯ ಜೆರಾಕ್ಸ್ ಪ್ರತಿ ಹಾಗೂ ಪರೀಕ್ಷಾ ಶುಲ್ಕ ಕಟ್ಟಿದ ರಶೀದಿಯೊಂದಿಗೆ ಫಲಿತಾಂಶ ಪ್ರಕಟವಾದ ಹದಿನೈದು ದಿನಗಳೊಳಗಾಗಿ(ದಿನಾಂಕ:03/07/2024) ಪೂರ್ಣ ಮಾಹಿತಿಯನ್ನು ಸಲ್ಲಿಸಿ ತಪ್ಪದೇ ಫಲಿತಾಂಶ ಪಡೆಯುವಂತೆ ತಿಳಿಸಲಾಗಿದೆ. ತಪ್ಪಿದಲ್ಲಿ ಆ ಸಂಸ್ಥೆಯ ಪ್ರಿನ್ಸಿಪಾಲರೇ ಜವಾಬ್ದಾರರಾಗಿರುತ್ತಾರೆ.

ವಿಶೇಷ ಸೂಚನೆ:-

ಮೇ-2024 ರ ಸೆಮಿಸ್ಟರ್ ಪರೀಕ್ಷೆಗಳ ಥಿಯರಿ ಉತ್ತರ ಪತ್ರಿಕೆಗಳ ಫೋಟೋ ಪ್ರತಿ / ಮರು ಮೌಲ್ಯಮಾಪನಕ್ಕೆ ತಮ್ಮ ಸಂಸ್ಥೆಯ ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳ ವಿವರಗಳನ್ನು ಈಗಾಗಲೇ BTELinx ವೆಬ್ ಪೋರ್ಟಲ್ ಮೂಲಕ Online ನಲ್ಲಿ Update ಮಾಡಬೇಕಾಗಿರುತ್ತದೆ. ಪ್ರತಿ ಅರ್ಜಿಯ ವಿವರಗಳನ್ನು ಆನ್‌ಲೈನ್‌ನಲ್ಲಿ Update ಮಾಡಿದ ನಂತರ ಬರುವಂತಹ ಒಂದು Acknowledgement Slip ಪ್ರಿಂಟ್ ತೆಗೆದು ಆಯಾ ಅರ್ಜಿಗಳಿಗೆ ಲಗತ್ತಿಸಿ ಸದರಿ ಅರ್ಜಿಗಳನ್ನು ತಮ್ಮ ಮೇಲು ರುಜು ಮಾಡಿ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು,

ಇವರಿಗೆ ದಿನಾಂಕ: 25/06/2024 ರೊಳಗಾಗಿ ರವಾನಿಸಲು ಎಲ್ಲಾ ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿದೆ.

BTELinx ನಲ್ಲಿ ವಿದ್ಯಾರ್ಥಿಗಳ ವಿವರಗಳನ್ನು Update ಮಾಡಿ Acknowledgement Slip ನ್ನು ಲಗತ್ತಿಸದೇ ಸಲ್ಲಿಸುವ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲವೆಂದು ತಿಳಿಸಲಾಗಿದೆ.

ತಮ್ಮ ನಂಬುಗೆಯ,

ಕಾರ್ಯದರ್ಶಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

ಇವರಿಗೆ,
ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ - ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:
1. ಆಯುಕ್ತರ ಆಪ್ತ ಶಾಖೆ - ಅವಗಾಹನೆಗಾಗಿ.
2. ನಿರ್ದೇಶಕರ ಆಪ್ತ ಶಾಖೆ- ಅವಗಾಹನೆಗಾಗಿ.
3. ಸಹಾಯಕ ನಿರ್ದೇಶರು (ಎಸಿಎಂ)
4. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
5. ಇಸಿಎಸ್/ಇಎಫ್‌ಎಸ್/ಇಆರ್‌ಎಸ್, ಮುಂದಿನ ಕ್ರಮಕ್ಕಾಗಿ.
6. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ರಿಜಿಸ್ಟ್ರಾರ್ (ಪರೀಕ್ಷೆ)
8. ಕಾರ್ಯದರ್ಶಿಯವರ ಆಪ್ತ ಶಾಖೆ.
9. ಉಪ ನಿರ್ದೇಶಕರು (ಪರೀಕ್ಷೆ)
10. ಅಧೀಕ್ಷಕರು ಆರ್ ಡಿ ಎಂ (01)ರಿಂದ (15)
11. ಗಣಕ ಕೇಂದ್ರ ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು.
12. ಕಚೇರಿ ಪ್ರತಿ.

**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/01/ಇಎಪಿ/2024.

ಆಯುಕ್ತರವರ ಕಛೇರಿ,
ಕಾಲೇಜು ಮತ್ತುತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆರಸ್ತೆ, ಬೆಂಗಳೂರು-560001,
ದಿನಾಂಕ: 20.06.2024.

**ಸುತ್ತೋಲೆ**

**ವಿಷಯ**: ಪರೀಕ್ಷಾ ಫಲಿತಾಂಶ ಹಿಂದಕ್ಕೊಪ್ಪಿಸುವ ಅರ್ಜಿಗಳ ಬಗ್ಗೆ.

**ಉಲ್ಲೇಖ**:
1. ಸರ್ಕಾರಿ ಆದೇಶ ಸಂ:ಇಡಿ/258/ಟಿಪಿಇ 12, ಬೆಂಗಳೂರು, ದಿ: 06-11-1997.
2. ಸರ್ಕಾರಿ ಆದೇಶ ಸಂ:ಇಡಿ/258/ಟಿಪಿಇ/98, ಬೆಂಗಳೂರು ದಿ:11-8-2000.
3. ಸರ್ಕಾರಿ ಆದೇಶ ಸಂ:ಎಫ್ ಡಿ/11/ಟಿಪಿಇ/2007 ಬೆಂಗಳೂರು, ದಿ:3-12-2007

*-*-*-*-*-*-*

ತಾಂತ್ರಿಕ ಪರೀಕ್ಷಾ ಮಂಡಳಿಯ ಡಿಪ್ಲೊಮ ಕೋರ್ಸುಗಳ ಮೇ-2024 ರ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ಹಿಂದಕ್ಕೊಪ್ಪಿಸಲು ಇಚ್ಚಿಸುವ ಅಭ್ಯರ್ಥಿಗಳ ಬಗ್ಗೆ ಪ್ರಿನ್ಸಿಪಾಲರುಗಳು ಅಭ್ಯರ್ಥಿಗಳ ಅಂಕಪಟ್ಟಿಗಳು ಬರುವವರೆಗೆ ಕಾಯದೆ ಫಲಿತಾಂಶದ ಜೊತೆಗೆ ಆನ್ ಲೈನ್ ನಲ್ಲಿ (BTE Linx) ಕಳುಹಿಸಿರುವ ಮಾರ್ಕ್ಸ್ ರಿಜಿಸ್ಟರ್‌ನಲ್ಲಿ ಸೂಚಿಸಿರುವ ಅಂಕಗಳ ಆಧಾರದ ಮೇಲೆ ಫಲಿತಾಂಶ ಪ್ರಕಟವಾದ 01 ತಿಂಗಳೊಳಗಾಗಿ (ದಿನಾಂಕ: 16.07.2024 ರೊಳಗೆ) ಫಲಿತಾಂಶ ಹಿಂದಕ್ಕೊಪ್ಪಿಸುವ ಅರ್ಜಿಗಳನ್ನು ಅಪೇಕ್ಷಿತ ಅಭ್ಯರ್ಥಿಗಳಿಂದ ಪಡೆದು ಕ್ರೋಢೀಕರಿಸಿ ತಾಂತ್ರಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಯವರಿಗೆ ದಿನಾಂಕ: 23-07-2024 ರೊಳಗೆ ಕಳುಹಿಸಿಕೊಡಲು ಸೂಚಿಸಲಾಗಿದೆ. ಇದಲ್ಲದೆ ಉಲ್ಲೇಖ (3) ರ ಸರ್ಕಾರದ ಆದೇಶದ ಪ್ರಕಾರ ಫಲಿತಾಂಶ ಹಿಂದಕ್ಕೊಪ್ಪಿಸುವ ಶುಲ್ಕ ರೂ.500/-ಗಳನ್ನು ಅಭ್ಯರ್ಥಿ ಅರ್ಜಿ ಸಲ್ಲಿಸಿದ ದಿನಾಂಕದಿಂದ 03 ದಿನಗಳೊಳಗಾಗಿ ಲೆಕ್ಕಶೀರ್ಷಿಕೆ (0202-02-101-0-01)ಗೆ ಜಮಾ ಮಾಡಲು ತಿಳಿಸಲಾಗಿದೆ. ಇದಕ್ಕೆ ತಪ್ಪಿದಲ್ಲಿ ಸಂಸ್ಥೆಯವರು ಉಲ್ಲೇಖಿಸಿದ ಸರ್ಕಾರಿ ಆದೇಶದ ಪ್ರಕಾರ ಪ್ರತಿದಿನ ತಡವಾಗಿ ಜಮಾ ಮಾಡಿದುದಕ್ಕೆ ದಂಡ ಶುಲ್ಕವೆಂದು ದಿನ ಒಂದಕ್ಕೆ ರೂ.1000/-ಗಳಂತೆ ಪಾವತಿ ಮಾಡಬೇಕಾಗಿರುತ್ತದೆ ಎಂದು ತಿಳಿಸಲಾಗಿದೆ.

ಕಾರ್ಯದರ್ಶಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

20/6/24

**ಇವರಿಗೆ,**

ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ - ಮುಂದಿನ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಆಯುಕ್ತರ ಆಪ್ತ ಶಾಖೆ - ಅವಗಾಹನೆಗಾಗಿ.
2. ನಿರ್ದೇಶಕರ ಆಪ್ತ ಶಾಖೆ- ಅವಗಾಹನೆಗಾಗಿ.
3. ಸಹಾಯಕ ನಿರ್ದೇಶರು (ಎಸಿಎಂ)
4. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
5. ಇಸಿಎಸ್/ಇಎಫ್‌ಎಸ್/ಇಆರ್‌ಎಸ್, ಮುಂದಿನ ಕ್ರಮಕ್ಕಾಗಿ.
6. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ರಿಜಿಸ್ಟ್ರಾರ್ (ಪರೀಕ್ಷೆ)
8. ಕಾರ್ಯದರ್ಶಿಯವರ ಆಪ್ತ ಶಾಖೆ.
9. ಉಪ ನಿರ್ದೇಶಕರು (ಪರೀಕ್ಷೆ)
10. ಅಧೀಕ್ಷಕರು ಆರ್ ಡಿ ಎಂ (01)ರಿಂದ (15)
11. ಗಣಕ ಕೇಂದ್ರ ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು.
12. ಕಚೇರಿ ಪ್ರತಿ.

**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/01/ಇಎಪಿ/2024.

ಆಯುಕ್ತರವರ ಕಛೇರಿ,
ಕಾಲೇಜು ಮತ್ತುತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆರಸ್ತೆ, ಬೆಂಗಳೂರು-560001,
ದಿನಾಂಕ: 20.06.2024.

**ಸುತ್ತೋಲೆ**

**ವಿಷಯ:** 2009-10, 2010-11, 2011-12, 2012-13, 2013-14, 2014-15 ಮತ್ತು 2015-16 ನೇ ಸಾಲಿನಲ್ಲಿ ವಿವಿಧ ಡಿಪ್ಲೋಮಾ ಕೋರ್ಸ್‌ಗಳ 1ನೇ ವರ್ಷಕ್ಕೆ ಪ್ರವೇಶ ಪಡೆದ ಹಾಗೂ 2011-12, 2012-13, 2013-14, 2014-15, 2015-16, 2016-17, 2017-18 ಮತ್ತು 2018-19 ನೇ ಸಾಲಿನಲ್ಲಿ ಲ್ಯಾಟರಲ್ ಎಂಟ್ರಿ ಮುಖಾಂತರ 2ನೇ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸುವ ಕುರಿತು.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂ:ಇಡಿ/178/ಟಿಪಿಇ 2009, ದಿ: 01.08.2009.
2. ಸರ್ಕಾರಿ ಆದೇಶ ಸಂ:ಇಡಿ/148/ಟಿಪಿಇ/2015, ದಿ: 23.06.2015.
3. ಸರ್ಕಾರದ ಪತ್ರ ಸಂ: ಇಡಿ 150 ಡಿಟಿಇ 2023, ದಿ: 24.11.2023.

*-*-*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶಗಳನ್ವಯ 2009-10, 2010-11, 2011-12, 2012-13, 2013-14, 2014-15 ಮತ್ತು 2015-16 ನೇ ಸಾಲಿನಲ್ಲಿ ವಿವಿಧ ಡಿಪ್ಲೋಮಾ ಕೋರ್ಸ್‌ಗಳ ಮೊದಲನೇ ವರ್ಷಕ್ಕೆ ಪ್ರವೇಶ ಪಡೆದ ಹಾಗೂ 2011-12, 2012-13, 2013-14, 2014-15, 2015-16, 2016-17, 2017-18 ಮತ್ತು 2018-19 ನೇ ಸಾಲಿನಲ್ಲಿ ಲ್ಯಾಟರಲ್ ಎಂಟ್ರಿ ಮುಖಾಂತರ ಎರಡನೇ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ಶೈಕ್ಷಣಿಕ ಅವಧಿ ಮುಗಿದಿರುವ ಕಾರಣ ಸದರಿ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸದಂತೆ ಕ್ರಮವಹಿಸಲು ಈ ಮೂಲಕ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳ ಗಮನಕ್ಕೆ ತರಲಾಗಿದೆ.

ಕಾರ್ಯದರ್ಶಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

**ಇವರಿಗೆ,**

ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ - ಮುಂದಿನ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**
1. ಆಯುಕ್ತರ ಆಪ್ತ ಶಾಖೆ - ಅವಗಾಹನೆಗಾಗಿ.
2. ನಿರ್ದೇಶಕರ ಆಪ್ತ ಶಾಖೆ- ಅವಗಾಹನೆಗಾಗಿ.
3. ಸಹಾಯಕ ನಿರ್ದೇಶರು (ಎಸಿಎಂ)
4. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
5. ಇಸಿಎಸ್/ಇಎಫ್‌ಎಸ್/ಇಆರ್‌ಎಸ್, ಮುಂದಿನ ಕ್ರಮಕ್ಕಾಗಿ.
6. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ರಿಜಿಸ್ಟ್ರಾರ್ (ಪರೀಕ್ಷೆ)
8. ಕಾರ್ಯದರ್ಶಿಯವರ ಆಪ್ತ ಶಾಖೆ.
9. ಉಪ ನಿರ್ದೇಶಕರು (ಪರೀಕ್ಷೆ)
10. ಅಧೀಕ್ಷಕರು ಆರ್ ಡಿ ಎಂ (01)ರಿಂದ (15)
11. ಗಣಕ ಕೇಂದ್ರ ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು.
12. ಕಚೇರಿ ಪ್ರತಿ.